

بِسْمِ اللَّهِ الرَّحْمَنِ الرَّحِيم

# ರಮಝಾನ್‌ನಲ್ಲಿ ಗಳಿಸಿದ ಒಳಿತುಗಳನ್ನು ಸ್ಥಿರವಾಗಿ ಮುಂದುವರಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ 23-06-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ರಮಝಾನಿನ ಅನುಗ್ರಹಿಸಲ್ಪಟ್ಟ ತಿಂಗಳು ಆಗಮಿಸಿ ವೇಗವಾಗಿ ದಾಟಿ ಹೋಯಿತು. ಇಲ್ಲಿ ಹಗಲು ಬಹಳ ದೀರ್ಘವಾಗಿದ್ದರೂ ಸೆಖೆ ಅಧಿಕವಾಗಿದ್ದರೂ ನನ್ನನ್ನು ಭೇಟಿಯಾದವರು ಹೇಳಿದರು, ಈ ಸಾರಿ ಉಪವಾಸದಲ್ಲಿ ಹೆಚ್ಚು ಕಷ್ಟವೇನೂ ಆಗಲಿಲ್ಲ ಎಂದು. ಆದರೆ ಹೀಗಾದರೆ ಮಾತ್ರ ಸಾಕಾಗಲಾರದು. ಈ ಸಾರಿ ಉಪವಾಸ ಅಸಾಧಾರಣವಾಗಿ ಸುಲಭವಾಗಿ ದಾಟಿ ಹೋಯಿತು ಎಂದು ನಾವು ಹೇಳಿದರೆ ಸಾಕಾಗಲಾರದು. ನಾವು ನಮ್ಮ ಬಗ್ಗೆ ಪರಿಶೋಧಿಸಬೇಕು. ಈ ಅನುಗ್ರಹದಾಯಕ ದಿನಗಳಲ್ಲಿ ನಾವು ಏನು ಗಳಿಸಿದೆವು ಎಂದು ಪರಿಶೋಧಿಸಬೇಕು. ರಮಝಾನ್ ತಿಂಗಳಲ್ಲಿ ಅಲ್ಲಾಹನು ಏಳನೆಯ ಆಕಾಶದಿಂದ ಕೆಳಗಿರುವ ಆಕಾಶಕ್ಕೆ ಆಗಮಿಸುತ್ತಾನೆ. ತನ್ನ ದಾಸರಿಗೆ ಸಮೀಪವಾಗಿ ಅವರ ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಈ ದಿನಗಳಲ್ಲಿ ಉಪವಾಸ ಮಾಡುವವರಿಗೆ ಸ್ವತಃ ಅಲ್ಲಾಹನೇ ಪ್ರತಿಫಲವಾಗುತ್ತಾನೆ. ಈ ದಿನಗಳಲ್ಲಿ ಅಲ್ಲಾಹನು ಶೈತಾನನನ್ನು ಬಂಧಿಸಿಡುತ್ತಾನೆ. ಅಲ್ಲಾಹನ ಈ ಅನುಗ್ರಹಗಳನ್ನು ಗಳಿಸಲು ನಾವು ಈ ದಿನಗಳಲ್ಲಿ ಏನು ಮಾಡಿದೆವು, ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು, ಅವನ ಉಪದೇಶಗಳ ಪ್ರಕಾರ ಜೀವಿಸಲು, ಹಿಂದೆ ಮಾಡಿದ ತಪ್ಪುಗಳನ್ನು ಬಿಟ್ಟುಬಿಡಲು ಯಾವರೀತಿ ಪ್ರತಿಜ್ಞೆ ಮಾಡಿದೆವು ಮತ್ತು ನಾವು ನಮ್ಮೊಳಗೆ ಎಷ್ಟರ ಮಟ್ಟಿಗೆ ಬದಲಾವಣೆಗಳನ್ನು ಮಾಡಿದ್ದೇವೆ ಎಂದು ನೋಡಬೇಕು. ನಾವು ರಮಝಾನ್ ತಿಂಗಳಲ್ಲಿ ಮಾತ್ರ ನಮಾಝ್‌ಗಳನ್ನು ಕ್ರಮಬದ್ಧವಾಗಿ ಅನುಷ್ಠಿಸಿದ್ದರೆ, ಅನಂತರ ನಾವು ಅದರ ಬಗ್ಗೆ ಉದಾಸೀನರಾಗುವುದಾದರೆ ಅದು ಅಲ್ಲಾಹನ ಆಜ್ಞೆಗಳನ್ನು ಪಾಲಿಸಿದಂತಾಗಲಾರದು. ಜುಮುಅ ನಮಾಝ್‌ಗಳಲ್ಲಿ ಕ್ರಮಬದ್ಧವಾಗಿ ಭಾಗವಹಿಸುವುದು ಕೇವಲ ರಮಝಾನ್ ತಿಂಗಳಿಗೆ ಮಾತ್ರ ಸೀಮಿತವಾಗಿದ್ದರೆ ಅದು ಅಲ್ಲಾಹನ ಆಜ್ಞೆ ಪ್ರಕಾರ ವರ್ತಿಸುವುದು ಎಂದು ಗಣಿಸಲ್ಪಡಲಾರದು. ಪವಿತ್ರ ಖುರ್‌ಆನ್ ತಿಲಾವತ್ ಮಾಡುವುದು ರಮಝಾನ್ ತಿಂಗಳಲ್ಲಿ ಮಾತ್ರ ಸಾಕು ಎಂದು ನಾವು ಭಾವಿಸಿ ಅನಂತರ ಅದರ ಕಡೆಗೆ ಗಮನಿಸುವುದಿಲ್ಲವಾದರೆ ಅದು ಅಲ್ಲಾಹನು ಇಚ್ಛಿಸಿದ ಪ್ರಕಾರದ ನಡೆವಳಿಕೆ ಆಗಲಾರದು. ನಾವು ದುರೂದ್ ಪ್ರಾರ್ಥನೆ ಮತ್ತು ಝಿಕ್ರನ್ನು (ಅಲ್ಲಾಹನ ಸ್ಮರಣೆ) ರಮಝಾನ್ ತಿಂಗಳಿಗೆ ಮಾತ್ರ ಸೀಮಿತಗೊಳಿಸುವುದಾದರೆ ಕೇವಲ ಇದನ್ನು ಮಾತ್ರ ಅಲ್ಲಾಹನು ಇಚ್ಛಿಸುವುದಿಲ್ಲ. ನಾವು ಸುಸ್ವಭಾವಗಳನ್ನು ಮತ್ತು ಒಳಿತುಗಳನ್ನು ರಮಝಾನ್‌ನಲ್ಲಿ ಮಾತ್ರ ನಮ್ಮಲ್ಲಿ ಅಳವಡಿಸಿದರೆ ಸಾಕೆಂದು ಭಾವಿಸಿ ವರ್ತಿಸುವುದಾದರೆ ಅಲ್ಲಾಹನು ನಮ್ಮಿಂದ ಹಾಗೆ ಬಯಸುವುದಿಲ್ಲ.

ರಮಝಾನ್ ಒಂದು ತರಬೇತಿ ಶಿಬಿರದ ಹಾಗೆ ಆಗಮಿಸುತ್ತದೆ. ಅಲ್ಲಾಹನು ರಮಝಾನಿನ ಉಪವಾಸವನ್ನು ಕಡ್ಡಾಯ ಮಾಡಿದುದೇಕೆಂದರೆ ನೀವು ಮಾಡುವ ಒಳಿತುಗಳಲ್ಲಿ ಇನ್ನಷ್ಟು ಅಭಿವೃದ್ಧಿ ಉಂಟಾಗಬೇಕೆಂದು. ಆಗಮಿಸುವ ಪ್ರತಿಯೊಂದು ರಮಝಾನ್ ಮುಗಿತಾಯವಾಗುವಾಗ ಅದು ನಮ್ಮನ್ನು ಆರಾಧನೆಗಳಲ್ಲಿ ಮತ್ತು ಒಳಿತುಗಳಲ್ಲಿ ಹೊಸ ಮಜಲು ಮತ್ತು ಉನ್ನತಿಗಳಲ್ಲಿ ತಲಪಿಸುವಂತಹದಾಗಬೇಕು. ನಾವು ಆರಾಧನೆಗಳಿಗೆ ಮತ್ತು ಒಳಿತುಗಳಿಗೆ ಉನ್ನತ ಮಟ್ಟವನ್ನು ಸ್ಥಾಪಿಸುವವರಾಗಬೇಕು. ನಾವು ಸ್ಥಿರವಾಗಿ ಒಳಿತುಗಳನ್ನು ಮಾಡುವವರಾಗಬೇಕೆಂದು ಅಲ್ಲಾಹನು ಬಯಸುತ್ತಾನೆ. ಅಲ್ಲಾಹನು **ಅಖೀಮುಸ್ಸಲಾತ** (ನಮಾಝನ್ನು ನೆಲೆ ನಿಲ್ಲಿಸಿರಿ) ಎಂದು ಆಜ್ಞಾಪಿಸಿದ್ದಾನೆ. ನಮಾಝನ್ನು ನಿಗದಿತ ಸಮಯಗಳಲ್ಲಿ ಸಾವಧಾನದಿಂದ ಅನುಷ್ಠಿಸಬೇಕು. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ. **ಹಾಫಿಝೂ ಅಲಸ್ಸಲವಾತಿ ವಸ್ಸಲಾತಿಲ್ ಉಸ್‌ತಾ.** ಎಲ್ಲ ನಮಾಝ್‌ಗಳನ್ನು ಸಂರಕ್ಷಿಸಿರಿ. ವಿಶಿಷ್ಟವಾಗಿ ಮಧ್ಯದ ನಮಾಝ್ ಬಗ್ಗೆ ಲಕ್ಷ್ಯ ನೀಡಿರಿ ಎಂದು ಅಲ್ಲಾಹನು ಆಜ್ಞಾಪಿಸಿದ್ದಾನೆ. ಐದು ಹೊತ್ತಿನ ನಮಾಝ್ ಕಡ್ಡಾಯವಾಗಿದೆ ಎಂದು ಪ್ರತಿಯೊಬ್ಬ ಮುಸ್ಲಿಮನಿಗೆ ತಿಳಿದಿದೆ. ಆದುದರಿಂದ ಐದು ನಮಾಝ್‌ಗಳನ್ನೂ ಸಂರಕ್ಷಿಸಬೇಕೆಂಬ ಆಜ್ಞೆಯಿದೆ. ವಿಶಿಷ್ಟವಾಗಿ ಮಧ್ಯದ ನಮಾಝ್ ಬಗ್ಗೆ ಲಕ್ಷ್ಯ ನೀಡಲು ಆಜ್ಞಾಪಿಸಲಾಗಿದೆ. **ಸಲಾತುಲ್ ಉಸ್ತಾ** ಎಂದರೆ ಮಧ್ಯದ ನಮಾಝ್ ಅಥವಾ ಮುಖ್ಯ ನಮಾಝ್; ಎಂದರೆ ನಮಾಝ್ ಮಾಡುವ ಸಮಯದಲ್ಲಿ ಆ ನಮಾಝಿನ ಮಹತ್ವ ವರ್ಧಿಸುತ್ತದೆ. ಪ್ರತಿಯೊಂದು ನಮಾಝ್ ಫರ್ಝ್ ಆಗಿದೆ ಎಂದು ಅಲ್ಲಾಹನು ಹೇಳಿರುವಾಗ **ಸಲಾತುಲ್ ಉಸ್ತಾ** ಬಗ್ಗೆ ಅಲ್ಲಾಹನು ಮಹತ್ವ ನೀಡಿರುವುದು ಏಕೆ? ಇದಕ್ಕೆ ಕಾರಣವೇನೆಂದರೆ ಕೆಲವು ನಮಾಝ್‌ಗಳ ಅನುಷ್ಠಾನಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಮನುಷ್ಯನು ತನ್ನ ವೈಯಕ್ತಿಕ ಅಥವಾ ಲೌಕಿಕ ಆಶೆಗಳಿಗೆ ಆದ್ಯತೆ ನೀಡುವವನಾಗುತ್ತಾನೆ. ಕೆಲವರಿಗೆ ಫಜರ್ ನಮಾಝ್ ನಿರ್ವಹಿಸುವುದು ಕಷ್ಟಕರವಾಗುತ್ತದೆ. ಅಂತಹ ಸಂದರ್ಭದಲ್ಲಿ ನಿದ್ರೆಯಿಂದ ಎದ್ದು ಫಜರ್ ನಮಾಝ್ ಅನುಷ್ಠಿಸಿದರೆ ಅಲ್ಲಾಹನ ಸಾಮೀಪ್ಯ ಹೆಚ್ಚಾಗುತ್ತದೆ. ಅದು ಮಹತ್ವಪೂರ್ಣ ನಮಾಝ್ ಆಗುತ್ತದೆ. ಕೆಲವರಿಗೆ ತಮ್ಮ ಕೆಲಸಗಳ ಕಾರಣದಿಂದ ಝುಹರ್ ಅಥವಾ ಅಸರ್ ನಮಾಝ್‌ಗಳನ್ನು ಅನುಷ್ಠಿಸುವುದು ಕಷ್ಟಕರವಾಗುತ್ತದೆ. ಅಂತಹ ಸಂದರ್ಭದಲ್ಲಿ ಆ ನಮಾಝ್‌ಗಳ ಮಹತ್ವ

ವರ್ಧಿಸುತ್ತದೆ. ಎಂದರೆ ನಮಾಝ್ ಮಾಡಲು ಕಠಿಣ ಪರಿಶ್ರಮ ಮಾಡಿ ನಮಾಝ್ ಅನುಷ್ಠಿಸಿದರೆ ಅಲ್ಲಾಹನನ್ನು ಆರಾಧಿಸಲು ಪ್ರಯತ್ನ ಮಾಡುವುದಾದರೆ ಅಲ್ಲಾಹನು ಆ ಪ್ರಯತ್ನವನ್ನು ಲಕ್ಷಿಸಿ ಅನುಗ್ರಹ ನೀಡುತ್ತಾನೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಸ್ಥಳಗಳಲ್ಲಿ ವಿವಿಧ ಸಂದರ್ಭಗಳಲ್ಲಿ ನಮಾಝ್ ಬಗ್ಗೆ ನಮ್ಮ ಗಮನವನ್ನು ಹರಿಸಿದ್ದಾನೆ. ನಮಾಝನ್ನು ಕೇವಲ ರಮಝಾನಿಗೆ ಮಾತ್ರ ಸೀಮಿತ ಗೊಳಿಸಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹಿ ಅಲೈಹಿ ವಸಲ್ಲಮರು ನಮಾಝ್‌ಗಳ ಬಗ್ಗೆ, ಜುಮುಅಗಳ ಬಗ್ಗೆ ಮತ್ತು ರಮಝಾನ್ ಬಗ್ಗೆ ಎಂತಹ ಉಪದೇಶ ನೀಡಿದ್ದಾರೆಂದರೆ ಅದನ್ನು ಸತ್ಯವಿಶ್ವಾಸಿಯಾದವನು, ಅಲ್ಲಾಹನ ಭಯವನ್ನು ಹೃದಯದಲ್ಲಿ ಇರಿಸಿಕೊಂಡವನು ಪ್ರತಿ ಸಮಯದಲ್ಲಿ ತನ್ನ ಮುಂದೆ ಇರಿಸಬೇಕಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಐದು ಹೊತ್ತಿನ ನಮಾಝ್‌ಗಳು, ಒಂದು ಜುಮುಅದಿಂದ ಮುಂದಿನ ಜುಮುಅ ತನಕ, ಒಂದು ರಮಝಾನ್ ಮುಂದಿನ ರಮಝಾನ್ ತನಕ, ಅವುಗಳ ಮಧ್ಯೆ ಸಂಭವಿಸುವ ಪಾಪದೋಷಗಳಿಗೆ– ದೊಡ್ಡ ಪಾಪಕೃತ್ಯಗಳಿಂದ ರಕ್ಷಿಸಿಕೊಳ್ಳುವುದಾದರೆ– ಪಾಪಪರಿಹಾರ ದಾಯಕವಾಗುತ್ತದೆ. ಈ ಹದೀಸಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ, ಮನುಷ್ಯನು ಪ್ರಯತ್ನಪಟ್ಟು ಐದು ನಮಾಝ್‌ಗಳನ್ನು ಅನುಷ್ಠಿಸುವುದಾದರೆ, ನಮಾಝ್‌ಗಳ ಮಧ್ಯ ಕಾಲದಲ್ಲಿ ಪಾಪ ಕೃತ್ಯಗಳಿಂದ ತನ್ನನ್ನು ರಕ್ಷಿಸಲು ಪ್ರಯತ್ನಿಸುವುದಾದರೆ, ಐದು ನಮಾಝ್‌ಗಳು ಪಾಪಗಳಿಗೆ ಪರಿಹಾರವಾಗುತ್ತವೆ. ನಮಾಝ್‌ಗಳನ್ನು ನಿಗದಿತ ಸಮಯಗಳಲ್ಲಿ ಕ್ರಮಬದ್ಧವಾಗಿ ಅನುಷ್ಠಿಸುವುದಾದರೆ ಅಲ್ಲಾಹನು ಚಿಕ್ಕಪುಟ್ಟ ಕುಂದು ಕೊರತೆಗಳನ್ನು ಕ್ಷಮಿಸುವನು. ಅನಂತರ ಇದೇ ರೀತಿ ಜುಮುಅದ ಮಹತ್ವವನ್ನೂ ಸ್ಪಷ್ಟಪಡಿಸಲಾಗಿದೆ. ಐದು ಹೊತ್ತಿನ ನಮಾಝ್ ಫರ್ಝ್ ಆಗಿರುವ ಹಾಗೆ ಜುಮುಅ ನಮಾಝ್ ಸಹ ಫರ್ಝ್ ಆಗಿದೆ. ಒಂದು ಜುಮುಅದಿಂದ ಇನ್ನೊಂದು ಜುಮುಅದ ತನಕದ ಕಾಲಾವಧಿಯಲ್ಲಿ ಘಟಿಸುವ ಚಿಕ್ಕ ತಪ್ಪುಗಳನ್ನು, ಬಲಹೀನತೆಗಳನ್ನು, ಚಿಕ್ಕ ಪಾಪಗಳನ್ನು ಸಹ ಅಲ್ಲಾಹನು ಕ್ಷಮಿಸುತ್ತಾನೆ.

ಇದರ ಬಗ್ಗೆ ಯಾರಾದರೂ ಹೀಗೆ ಅರ್ಥ ಮಾಡಿಕೊಳ್ಳಬಾರದು. "ಈ ಮಧ್ಯಕಾಲದಲ್ಲಿ ಚಿಕ್ಕ ಪಾಪಗಳನ್ನು ಮಾಡಬಹುದು, ಅದನ್ನು ಅಲ್ಲಾಹನು ಕ್ಷಮಿಸುವನು" ಎಂದು. ಹಾಗೆ ಅಲ್ಲ. ಇದರ ಅರ್ಥವೇನೆಂದರೆ, ಮನುಷ್ಯ ಸಹಜವಾದ ಬಲಹೀನತೆ ಕಾರಣದಿಂದ ಯಾವುದಾದರೂ ಸಣ್ಣಪುಟ್ಟ ತಪ್ಪುಗಳು ಸಂಭವಿಸುವುದಾದರೆ, ನಮಾಝ್‌ಗಳಲ್ಲಿ ಮತ್ತು ಜುಮುಅಗಳಲ್ಲಿ ಕ್ರಮಬದ್ಧತೆ ಮತ್ತು ಪಾಪ ಕೃತ್ಯವನ್ನು ಕ್ಷಮಿಸಲು ಮಾಡುವ ಪ್ರಾರ್ಥನೆ ಮತ್ತು ಇನ್ನು ಮುಂದೆ ಈ ಪಾಪಕೃತ್ಯ ಮಾಡಲಾರೆನು ಎಂಬ ಪ್ರತಿಜ್ಞೆಯ ಕಾರಣದಿಂದ ಅಲ್ಲಾಹನು ಅವುಗಳನ್ನು ಕ್ಷಮಿಸುವನು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅದಲ್ಲಿ ಭಾಗವಹಿಸುವ ಮಹತ್ವದ ಬಗ್ಗೆ ವಿವರಿಸುತ್ತಾ ಹೀಗೆ ಹೇಳಿದ್ದಾರೆ: ಒಬ್ಬನು ಪ್ರಜ್ಞಾಪೂರ್ವಕವಾಗಿ ನಿರಂತರವಾಗಿ ಮೂರು ಜುಮುಅಗಳಲ್ಲಿ ಭಾಗವಹಿಸದೆ ಇದ್ದರೆ ಅಲ್ಲಾಹನು ಅವನ ಹೃದಯಕ್ಕೆ ಮುದ್ರೆ ಹಾಕುವನು. ಇನ್ನೊಂದು ಹದೀಸಿನಲ್ಲಿ, ಅಂತಹ ವ್ಯಕ್ತಿಯ ಹೃದಯ ಕಪ್ಪಗಾಗುವುದು ಎಂದು ಸಹ ಹೇಳಲಾಗಿದೆ. ಆದುದರಿಂದ ಪ್ರತಿಯೊಬ್ಬನು ಜುಮುಅದ ಈ ಮಹತ್ವವನ್ನು ಅರಿತುಕೊಳ್ಳಬೇಕು. ಇಂದು ರಮಝಾನಿನ ಕೊನೆಯ ಜುಮುಅ ಆಗಿದೆ. ಕೆಲವು ಜನರು ಇಂದು ರಮಝಾನಿನ ಕೊನೆಯ ಜುಮುಅ ಆಗಿರುವುದರಿಂದ ದೊಡ್ಡ ಮಸ್‌ಜಿದ್‌ನಲ್ಲಿ ಜುಮುಅ ನಮಾಝ್‌ಗೆ ಸೇರಬೇಕೆಂದು ಆಗಮಿಸಿರಬಹುದು. ರಮಝಾನಿನ ಕೊನೆಯ ಜುಮುಅದ ನಮಾಝ್ ಅನುಷ್ಠಿಸಲೇಬೇಕಾಗಿದೆ, ಆದುದರಿಂದ ಈ ನಮಾಝ್ ಅನುಷ್ಠಿಸಲೇಬೇಕು ಎಂದು ಹೇಳುವವರು ಸಹ ಇದ್ದಾರೆ. ಅಲ್ಲಾಹನು ರಮಝಾನಿನ ಜುಮುಅ ನಮಾಝ್ ಅನುಷ್ಠಿಸುವ ಬಗ್ಗೆಯಾಗಲಿ ರಮಝಾನಿನ ಕೊನೆಯ ಜುಮಅ ಅನುಷ್ಠಿಸಿದರೆ ಪುಣ್ಯ ಲಭಿಸುವುದೆಂದಾಗಲಿ ಹೇಳಿಲ್ಲ. ಅಲ್ಲಾಹನು ಪ್ರತಿಯೊಂದು ಜುಮುಅದ ಮಹತ್ವವನ್ನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: يَا أَيُّهَا الَّذِينَ آمَنُوا إِذَا نُودِيَ لِلصَّلَاةِ مِن يَوْمِ الْجُمُعَةِ فَاسْعَوْا إِلَىٰ ذِكْرِ اللَّهِ وَذَرُوا الْبَيْعَ ۚ ذَٰلِكُمْ خَيْرٌ لَّكُمْ إِن كُنتُمْ تَعْلَمُونَ **ಯಾ ಅಯ್ಯುಹಲ್ಲದೀನ ಆಮನೂ ಇದ಼ಾ ನೂದಿಯ ಲಿಸ್ಸಲಾತಿ ಮಿನ್ ಯೌಮಿಲ್ ಜುಮುಅತಿ ಫಸ್‌ಅವ್ ಇಲಾ ಧಿ಼ಕ್ರಿಲ್ಲಾಹಿ ವಧ಼ರುಲ್ ಬೈಅ. ದ಼ಾಲಿಕುಮ್ ಖೈರುಲ್ಲಕುಮ್ ಇನ್‌ಕುನ್‌ತುಮ್ ತಅ್‌ಲಮೂನ್.** ಓ ಸತ್ಯವಿಶ್ವಾಸಿಗಳೇ, ಶುಕ್ರವಾರ ದಿನದಂದು ನಿಮ್ಮನ್ನು ಪ್ರಾರ್ಥನೆಗೆ ಕರೆಯಲಾದರೆ ಅಲ್ಲಾಹನನ್ನು ಸ್ಮರಿಸಲಿಕ್ಕೋಸ್ಕರ ನೀವು ತ್ವರಿತವಾಗಿ ಹೋಗಿರಿ. ನಿಮ್ಮ ವ್ಯಾಪಾರ ವ್ಯವಹಾರವನ್ನೆಲ್ಲ ನಿಲ್ಲಿಸಿರಿ, ನೀವು ಮನವರಿಕೆ ಮಾಡಿದರೆ ಅದೇ ನಿಮಗೆ ಉತ್ತಮವಾದುದು. (62:10).

ಸತ್ಯವಿಶ್ವಾಸಿ ಎಂದು ವಾದಿಸುವವನಿಗೆ ಅಲ್ಲಾಹನು ಈರೀತಿ ಆಜ್ಞಾಪಿಸಿರುವನು: ಪ್ರತಿಯೊಂದು ಜುಮುಅ ನಮಾಝ್ ಬಗ್ಗೆ ವಿಶಿಷ್ಟ ಮಹತ್ವ ನೀಡಿರಿ; ನಿಮ್ಮ ವ್ಯಾಪಾರಗಳನ್ನೂ ಕೆಲಸಗಳನ್ನೂ ಬಿಟ್ಟು ನಮಾಝ್‌ಗೆ ಬನ್ನಿರಿ ಎಂದು. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: ನೀವು ತಿಳಿದುಕೊಳ್ಳುವಿರಾದರೆ ಅದು ನಿಮಗೆ ಉತ್ತಮವಾಗಿದೆ. ಅದರ ಮೂಲಕ ನಿಮಗೆ ಅನುಗ್ರಹ ಲಭಿಸುವುದು. ಅದರ ಮೂಲಕ ನಿಮ್ಮ ಕೆಲಸಗಳಿಗೆ ಸಂಬಂಧಿಸಿ ನಿಮಗೆ ಅನುಗ್ರಹ ಸಿಗುವುದು. ಯಥಾರ್ಥ ಸತ್ಯವಿಶ್ವಾಸಿಯಾದ ಒಬ್ಬನು ತನ್ನ ಲೌಕಿಕ ಲಾಭಕ್ಕೋಸ್ಕರ ಜುಮುಅ ನಮಾಝನ್ನು ಬಲಿದಾನ ಮಾಡಲಾರನು.

ಜುಮುಅದ ಬಗ್ಗೆ ಹೇಳುವುದಾದರೆ, ಜುಮುಅ ನಮಾಝ್‌ನಲ್ಲಿ ಭಾಗವಹಿಸುವುದು ಪುರುಷರಿಗೆ ಫರ್ಝ್ ಆಗಿದೆ. ಮಹಿಳೆಯರಿಗೆ ಭಾಗವಹಿಸಲು ಸಾಧ್ಯವಿದ್ದರೆ ಒಳ್ಳೆಯದು. ಅವರು ಹೆಚ್ಚುವರಿ ಪುಣ್ಯ ಗಳಿಸುವರು.

ಅವರು ನಿಸ್ಸಂಶಯವಾಗಿ ಭಾಗವಹಿಸಬಹುದು. ತಾಯಂದಿರು ಜುಮುಅಕ್ಕೆ ಆಗಮಿಸುವ ಕಾರಣ ಮಕ್ಕಳಲ್ಲಿ ಜುಮುಅದ ಬಗ್ಗೆ ಅಭಿರುಚಿ ಉಂಟಾಗುತ್ತದೆ. ಜುಮುಅದ ಮಹತ್ವ ಮಕ್ಕಳು ತಿಳಿದುಕೊಳ್ಳುತ್ತಾರೆ. ಆದರೆ ಜುಮುಅ ನಮಾಝ್‌ಗೋಸ್ಕರ ಮಸ್‌ಜಿದ್‌ಗೆ ಆಗಮಿಸುವುದು ಪುರುಷರಿಗೆ ಮಾತ್ರ ಕಡ್ಡಾಯ ಆಗಿದೆ. ಇದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶ ಬಹಳ ಸ್ಪಷ್ಟವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು– ಪ್ರತಿಯೊಬ್ಬ ಮುಸ್ಲಿಮನು ಜುಮುಅ ನಮಾಝ್ ಅನುಷ್ಠಿಸುವುದು ಫರ್ಝ್ ಆಗಿದೆ. ಆದರೆ ನಾಲ್ಕು ರೀತಿಯ ಜನರಿಗೆ ಇದು ಫರ್ಝ್ ಅಲ್ಲ. ಗುಲಾಮರು, ಮಹಿಳೆಯರು, ಮಕ್ಕಳು ಮತ್ತು ರೋಗಿಗಳು. ಈ ದೇಶಗಳಲ್ಲಿ ನೌಕರಿ ಮಾಡುವವರು ತಮ್ಮ ಮಾಲಿಕರಿಗೆ ಹೇಳಿ ಜುಮುಅದಲ್ಲಿ ಭಾಗವಹಿಸಲು ಬಿಡುವು ದೊರಕಿಸಿಕೊಳ್ಳಲು ಪ್ರಯತ್ನಿಸಬೇಕು. ಕೆಲವು ಜನರು ಪ್ರಯತ್ನ ಮಾಡಿದಾಗ ಅವರಿಗೆ ಅನುಮತಿ ಸಹ ದೊರಕಿತು. ಆದರೆ ಅದು ಸಾಧ್ಯವಾಗದಿದ್ದರೆ ಹತ್ತಿರವಿರುವ ಮೂರು ನಾಲ್ಕು ಅಹ್ಮದಿಯರು ಒಟ್ಟಿಗೆ ಸೇರಿ ಜುಮುಅ ನಮಾಝ್ ಅನುಷ್ಠಿಸಬಹುದು. ಆದರೆ ಈದ್ ನಮಾಝ್‌ಗೆ ಪ್ರತಿಯೊಬ್ಬ ಆಗಮಿಸುವುದು ಆವಶ್ಯಕವಾಗಿದೆ. ಪ್ರತಿಯೊಬ್ಬ ಪುರುಷ, ಮಹಿಳೆ, ಮಗು ಈದ್ ನಮಾಝ್‌ನಲ್ಲಿ ಭಾಗವಹಿಸುವುದು ಆವಶ್ಯಕವಾಗಿವೆ. ಈ ದಿನ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜುಮುಅ ನಮಾಝ್‌ಗೆ ಆಗಮಿಸಿದ್ದಾರೆ. ಪುರುಷರು ತಮ್ಮ ಜುಮುಅ ನಮಾಝ್‌ಗಳನ್ನು ವಿಶಿಷ್ಟವಾಗಿ ಸಂರಕ್ಷಿಸುವುದು ಆವಶ್ಯಕವಾಗಿದೆ ಎಂಬುದರ ಕಡೆಗೆ ನಿಮ್ಮೆಲ್ಲರ ಗಮನ ಹರಿಸಲು ಬಯಸುತ್ತೇನೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ರಮಝಾನ್‌ನಿಂದ ಇನ್ನೊಂದು ರಮಝಾನ್ ತನಕದ ಚಿಕ್ಕ ಪಾಪಗಳನ್ನು ಅಲ್ಲಾಹನು ಕ್ಷಮಿಸುವ ಬಗ್ಗೆ ಹೇಳಿದ್ದಾರೆ. ಆದರೆ ಇದರ ಬಗ್ಗೆ ಸ್ಪಷ್ಟವಾಗಿ ತಿಳಿಯಬೇಕಾದುದೇನೆಂದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪಾಪಗಳು ಕ್ಷಮಿಸಲ್ಪಡುವ ಮಾರ್ಗಗಳನ್ನು ಅನುಕ್ರಮವಾಗಿ ಹೇಳಿದ್ದಾರೆ. ಮೊದಲು ನಮಾಝ್, ಅನಂತರ ಜುಮುಅ, ಆಮೇಲೆ ರಮಝಾನ್. ಅನುಕ್ರಮವಾಗಿ ಹೀಗೆ ಹೇಳಿರುವುದರಿಂದ, ಒಂದು ವರ್ಷದ ನಂತರ ರಮಝಾನಿನ ಆರಾಧನೆ ಮೂಲಕ ಪಾಪಗಳು ಕ್ಷಮಿಸಲ್ಪಡುವುವು ಎಂಬ ತಪ್ಪು ಗ್ರಹಿಕೆ ನಿವಾರಣೆಯಾಗುತ್ತದೆ. ಅನುಕ್ರಮವಾಗಿ ಹೇಳಿರುವುದು ಸೂಚಿಸುವುದೇನೆಂದರೆ, ಪ್ರತಿದಿನ ಐದು ಹೊತ್ತು ನಮಾಝ್ ಅನುಷ್ಠಿಸಿದರೆ ಅಂತಹ ವ್ಯಕ್ತಿಯನ್ನು ಸುರಕ್ಷಿತ ಕೋಟೆಯಲ್ಲಿ ಸಂರಕ್ಷಿಸಿ, ಏಳನೆಯ ದಿನ ಜುಮುಅದಲ್ಲಿ ಪ್ರವೇಶಗೊಳಿಸಿ ಜುಮುಅದ ಅನುಗ್ರಹಗಳ ಪಾಲು ನೀಡಲಾಗುವುದು. ಹಾಗೆಯೇ ಅವರನ್ನು ಇಡೀ ವರ್ಷದ ಜುಮುಅ ರಮಝಾನ್‌ನಲ್ಲಿ ಪ್ರವೇಶಗೊಳಿಸಿ ರಮಝಾನಿನ ಅನುಗ್ರಹ ಲಭಿಸುವಂತೆ ಮಾಡಲಾಗುವುದು.

ಪ್ರತಿದಿನದ ಐದು ಹೊತ್ತಿನ ನಮಾಝ್‌ಗಳು ಅಲ್ಲಾಹನ ಮುಂದೆ ವಿನಂತಿಸುವುವು– ನಿನ್ನ ಈ ದಾಸನು ನಿನ್ನ ಭಯ ಮತ್ತು ನಿನ್ನ ಬಗ್ಗೆ ಪ್ರೀತಿಯಿಂದ ದೊಡ್ಡ ಪಾಪಗಳಿಂದ ರಕ್ಷಣೆ ಪಡೆಯುತ್ತಾ ಐದು ಹೊತ್ತು ನಿನ್ನ ಸನ್ನಿಧಿಯಲ್ಲಿ ಹಾಜರಾಗುತ್ತಾ ಇದ್ದನು. ಹಾಗೆಯೇ ಪ್ರತಿಯೊಂದು ಜುಮುಅ ಹೀಗೆ ಅಲ್ಲಾಹನೊಂದಿಗೆ ವಿನಂತಿಸುವುದು, ನಿನ್ನ ಈ ದಾಸನು ಏಳು ದಿನ ತನ್ನನ್ನು ದೊಡ್ಡ ಪಾಪಗಳಿಂದ ರಕ್ಷಿಸುತ್ತಾ ಜುಮುಅದ ದಿನ ನಿನ್ನ ಸನ್ನಿಧಿಯಲ್ಲಿ ಹಾಜರಾಗುತ್ತಾ ಇದ್ದನು. ರಮಝಾನ್ ಅಲ್ಲಾಹನೊಂದಿಗೆ ಹೀಗೆ ವಿನಂತಿಸುವುದು: ನಿನ್ನ ಈ ದಾಸನು ರಮಝಾನ್‌ಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುತ್ತಾ ಪಾಪಗಳಿಂದ ರಕ್ಷಣೆ ಪಡೆಯುತ್ತಾ ಒಳಿತುಗಳನ್ನು ಮಾಡುತ್ತಾ ಈ ರಮಝಾನ್‌ನಲ್ಲಿ ನೀನು ಕ್ಷಮೆ ನೀಡಿ ಅಗ್ನಿಯಿಂದ ರಕ್ಷಿಸುವೆ ಎಂಬ ಭರವಸೆಯನ್ನು ಹೊಂದಿ ಪ್ರವೇಶಿಸಿದ್ದಾನೆ.

ಅತ್ಯಂತ ಕರುಣಾಮಯನೂ ಕೃಪಾಳುವೂ ಆಗಿರುವ ಅಲ್ಲಾಹನು ಅವುಗಳಿಂದ ಅನುಗ್ರಹ ನೀಡುತ್ತಾ ಮನುಷ್ಯನನ್ನು ತನ್ನ ಅನುಗ್ರಹದ ಚಾದರದಿಂದ ಹೊದಿಸುತ್ತಾನೆ. ಶೈತಾನನ ಆಕ್ರಮಣಗಳಿಂದ ಅವನನ್ನು ರಕ್ಷಿಸುತ್ತಾನೆ. ಆದುದರಿಂದ ಈ ಯೋಚನೆಯೊಂದಿಗೆ ತಮ್ಮ ನಮಾಝ್‌ಗಳನ್ನೂ, ಜುಮುಅಗಳನ್ನೂ, ಉಪವಾಸಗಳನ್ನೂ ನಿಷ್ಠಾವಂತರಾಗಿ ಅನುಷ್ಠಿಸಿ ಆ ಮೂಲಕ ಅಲ್ಲಾಹನ ಆಶ್ರಯ ಪಡೆಯುವವರು ಅದೃಷ್ಟಶಾಲಿಗಳಾಗಿದ್ದಾರೆ. ಅವರು ರಮಝಾನಿನ ಈ ಪರಿಸರದಲ್ಲಿ ಪ್ರತಿಯೊಂದು ರೀತಿಯಲ್ಲಿ ಪರಿಶುದ್ಧವಾಗಿ ಹೊರಗೆ ಬರುತ್ತಾರೆ. ಈ ಪರಿಶುದ್ಧತೆ ಅವರನ್ನು ಅಲ್ಲಾಹನ ಆರಾಧನೆಯನ್ನು ಮಾಡುವುದರಲ್ಲಿ ನಿಷ್ಠಾವಂತರನ್ನಾಗಿ ಮಾಡುತ್ತದೆ.

ರಮಝಾನಿನಲ್ಲಿ ವಿಶಿಷ್ಟವಾಗಿ ಪವಿತ್ರ ಖುರ್‌ಆನ್ ಓದುವ ಬಗ್ಗೆ ಮತ್ತು ಆಲಿಸುವ ಬಗ್ಗೆ ಗಮನ ಹರಿಸಲಾಗುತ್ತದೆ. ಬಹಳ ಜನರು ಪವಿತ್ರ ಖುರ್‌ಆನನ್ನು ಕನಿಷ್ಠ ಒಂದು ಸಾರಿಯಾದರೂ ಪೂರ್ಣವಾಗಿ ಓದಿ ಮುಗಿಸಲು ಬಯಸುತ್ತಾರೆ. ಇದು ಸುನ್ನತ್ ಸಹ ಆಗಿದೆ. ಈ ತಿಂಗಳಲ್ಲಿ ಪವಿತ್ರ ಖುರ್‌ಆನ್ ತಿಲಾವತ್ ಮಾಡುವ ಬಗ್ಗೆ ಸಹ ಗಮನ ಹರಿಸಬೇಕು ಮತ್ತು ಅದರ ವ್ಯವಸ್ಥೆ ಮಾಡಬೇಕು. ಪ್ರತಿದಿನ ಪವಿತ್ರ ಖುರ್‌ಆನಿನ ಸ್ವಲ್ಪ ಭಾಗವಾದರೂ ಓದಿ ಮುಗಿಸಬೇಕು. ಅಲ್ಲಾಹನು ನಮಾಝ್‌ಗಳ ವಿವಿಧ ಸಮಯಗಳ ಬಗ್ಗೆ ಹೇಳಿದ ಹಾಗೆಯೇ ಪವಿತ್ರ ಖುರ್‌ಆನ್ ಬಗ್ಗೆಯೂ ಹೇಳಿದ್ದಾನೆ: وَقُرْآنَ الْفَجْرِ ۖ إِنَّ قُرْآنَ الْفَجْرِ كَانَ مَشْهُودًا **ವ ಖುರ್‌ಆನಲ್ ಫಜ್‌ರಿ ಇನ್ನ ಖುರ್‌ಆನಲ್ ಫಜ್‌ರಿ ಕಾನ ಮಶ್‌ಹೂದ.** ಎಂದರೆ ಬೆಳಗ್ಗಿನ ಹೊತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದರ ಬಗ್ಗೆ ಮಹತ್ವ ನೀಡಿರಿ. ನಿಶ್ಚಯವಾಗಿಯೂ ಬೆಳಗ್ಗಿನ ಹೊತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದರ ಬಗ್ಗೆ ಸಾಕ್ಷ್ಯ ನೀಡಲ್ಪಡುತ್ತದೆ. ಆದುದರಿಂದ ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದು ವಿಶಿಷ್ಟ ದಿನಗಳ ತನಕ ಮಾತ್ರ ಎಂದು ನಿಶ್ಚಯಿಸಿಲ್ಲ. ನಮಾಝ್‌ನೊಂದಿಗೆ ಅದನ್ನು ಹೇಳಿ ಅದರ ಮಹತ್ವವನ್ನು ವಿವರಿಸಲಾಗಿದೆ.

ಪವಿತ್ರ ಖುರ್‌ಆನ್ ಪಾರಾಯಣದೊಂದಿಗೆ ಅದನ್ನು ಅರ್ಥ ಮಾಡಿಕೊಳ್ಳುವುದು ಸಹ ಆವಶ್ಯಕವಾಗಿದೆ. ಅದರ

ಭಾಷಾಂತರ ಕಲಿಯುವ ಆವಶ್ಯಕತೆ ಇದೆ. ಆ ಮೂಲಕ ಅಲ್ಲಾಹನ ಆಜ್ಞೆಗಳ ಬಗ್ಗೆ ತಿಳಿಯಬಹುದು. ಮುಸ್ಲಿಮರೆಂದು ಹೇಳಿಕೊಳ್ಳುವವರು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮರೆತು ಬಿಟ್ಟಿರುವ ಈ ಕಾಲದಲ್ಲಿ ನಾವು ಅದರ ಅರ್ಥವನ್ನು ಕಲಿಯಬೇಕಾದುದು ಅತ್ಯಂತ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಗಮನ ಹರಿಸುತ್ತಾ ಹೀಗೆ ಹೇಳಿದ್ದಾರೆ: ಪವಿತ್ರ ಖುರ್‌ಆನನ್ನು ಯಾರು ಗೌರವಿಸುತ್ತಾರೋ ಅವರು ಆಕಾಶದಲ್ಲಿ ಗೌರವಿಸಲ್ಪಡುವರು. ಆಕಾಶದಲ್ಲಿ ಗೌರವ ಪಡೆಯಲು ಇಚ್ಛಿಸದವರು ಯಾರಿದ್ದಾರೆ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಹೇಳಿದ್ದಾರೆ: ನನ್ನನ್ನು ಬೈಅತ್ ಮಾಡಿದವರು ಆರಾಧನೆಗಳ ಮೂಲಕ ಮತ್ತು ಉನ್ನತ ಸ್ವಭಾವ ಗುಣಗಳ ಮೂಲಕ ತಮ್ಮಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡುತ್ತಾ ಇರಬೇಕು. ಅವರು ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಎಂದಿನ ತನಕ ಮನುಷ್ಯನು ಶುದ್ಧ ಹೃದಯದಿಂದಲೂ ಸತ್ಯ ಮತ್ತು ನಿಷ್ಠೆಯಿಂದಲೂ ಎಲ್ಲ ನಿಷಿದ್ಧ ಮಾರ್ಗಗಳ ಮತ್ತು ಪ್ರತೀಕ್ಷೆಗಳ ಬಾಗಿಲುಗಳನ್ನು ತನಗೆ ಮುಚ್ಚಿಬಿಟ್ಟು ಅಲ್ಲಾಹನ ಮುಂದೆ ಬೇಡಿಕೊಳ್ಳುತ್ತಾ ಕೈ ಚಾಚುವುದಿಲ್ಲವೋ ಅಷ್ಟರ ತನಕ ಅವನಿಗೆ ಅಲ್ಲಾಹನ ಸಹಾಯ ಲಭಿಸುವ ಅರ್ಹತೆ ಇರುವುದಿಲ್ಲ. ಆದರೆ ಅವನು ಅಲ್ಲಾಹನ ಬಾಗಿಲಲ್ಲಿ ಬಿದ್ದು ಪ್ರಾರ್ಥಿಸುವಾಗ ಅವನು ಅಲ್ಲಾಹನ ನೆರವನ್ನು ಸೆಳೆಯುತ್ತಾನೆ. ಅಲ್ಲಾಹನು ಆಕಾಶದಿಂದ ಮನುಷ್ಯನ ಹೃದಯದ ಮೂಲೆಗಳನ್ನು ಇಣುಕಿ ನೋಡುತ್ತಾನೆ. ಆದರೆ ಅವನ ಹೃದಯದ ಯಾವುದಾದರೂ ಮೂಲೆಯಲ್ಲಿ ಅಂಧಕಾರ, ಶಿರ್ಕ್, ಬಿದ್‌ಅತ್‌ಗಳ ಅಂಶವೇನಾದರೂ ಇದ್ದಲ್ಲಿ ಅವನ ಪ್ರಾರ್ಥನೆಗಳನ್ನು ಮತ್ತು ಆರಾಧನೆಗಳನ್ನು ಅವನ ಮುಖಕ್ಕೆ ಎಸೆದು ಬಿಡುತ್ತಾನೆ. ಅವನ ಹೃದಯ ಅಂಧಕಾರಗಳಿಂದಲೂ ಇಂದ್ರಿಯೇಚ್ಛೆಗಳಿಂದಲೂ ಮುಕ್ತವಾಗಿ ಪರಿಶುದ್ಧವಾಗಿದ್ದರೆ ಅವನಿಗೆ ಅನುಗ್ರಹಗಳ ಬಾಗಿಲನ್ನು ತೆರೆಯುತ್ತಾನೆ. ಅವನನ್ನು ತನ್ನ ಆಶ್ರಯದಲ್ಲಿರಿಸಿ ಅವನ ಪರಿಪಾಲನೆಗೆ ಸ್ವತಃ ಜವಾಬ್ದಾರಿ ವಹಿಸುತ್ತಾನೆ.

ನಾವು ಸ್ಥಿರವಾಗಿ ಈ ಮಟ್ಟವನ್ನು ತಲಪಲು ಪ್ರಯತ್ನಿಸುತ್ತಾ ಇರಬೇಕು. ನಮ್ಮ ಆರಾಧನೆಗಳು ಅಲ್ಲಾಹನಿಗೆ ಮಾತ್ರವಾಗಿರಬೇಕು. ರಮಝಾನಿನ ನಂತರ ಸಹ ನಾವು ನಮ್ಮ ಆರಾಧನೆಗಳ ಮಟ್ಟವನ್ನು ಕಾಪಾಡುವವರಾಗಬೇಕು. ನಾವು ಪ್ರತಿಕ್ಷಣ ಅಲ್ಲಾಹನ ಆಶ್ರಯದಲ್ಲಿ ಇರುತ್ತಾ ಅವನ ಪರಿಪಾಲನೆಯ ಅನುಗ್ರಹ ಗಳಿಸುತ್ತಾ ಇರಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಿಮ್ಮ ಬಾಹ್ಯ ಮತ್ತು ಅಂತರಂಗ ಒಂದೇ ರೀತಿ ಆಗುವ ತನಕ ನೀವು ಅಲ್ಲಾಹನ ಸನ್ನಿಧಿಯಲ್ಲಿ ಅಂಗೀಕಾರ ಪಡೆಯಲಾರಿರಿ. ದೊಡ್ಡವರಾಗಿ ಚಿಕ್ಕವರ ಮೇಲೆ ದಯೆ ತೋರಿಸಿರಿ. ಅವರನ್ನು ಹೀನೈಸಬೇಡಿರಿ. ವಿದ್ಯಾವಂತರಾಗಿ ಅವಿದ್ಯಾವಂತರಿಗೆ ಉಪದೇಶಿಸಿರಿ. ನೀವು ಹೆಮ್ಮೆಯಿಂದ ಅವರನ್ನು ತಾತ್ಸಾರಭಾವದಿಂದ ಕಾಣಬೇಡಿರಿ. ಶ್ರೀಮಂತನಾಗಿ ಬಡವರಿಗೆ ಸೇವೆ ಮಾಡಿರಿ. ನೀವು ಅಹಂಭಾವದಿಂದ ಅವರೊಂದಿಗೆ ವರ್ತಿಸಬೇಡಿರಿ. ನಾಶದ ಮಾರ್ಗದ ಬಗ್ಗೆ ಭಯಪಡಿರಿ. ಅಲ್ಲಾಹನಿಗೆ ಭಯಪಡಿರಿ. ತಖ್ವ ಅವಲಂಬಿಸಿರಿ. ಸೃಷ್ಟಿಗಳನ್ನು ಪೂಜಿಸಬೇಡಿರಿ. ನೀವು ಲೋಕದ ಬಗ್ಗೆ ವಿಮುಖರಾಗಿರಿ. ನಿಮ್ಮ ಸೃಷ್ಟಿಕರ್ತನ ಕಡೆಗೆ ಬಾಗಿ ಅವನಿಗೆ ಸೇರಿದವರಾಗಿರಿ. ಅವನಿಗೋಸ್ಕರ ಜೀವಿಸಿರಿ. ಎಲ್ಲ ವಿಧಗಳ ಕೊಳಕು ಮತ್ತು ಪಾಪಕೃತ್ಯಗಳನ್ನು ಅವನಿಗೋಸ್ಕರ ದ್ವೇಷಿಸಿರಿ. ಏಕೆಂದರೆ ಅಲ್ಲಾಹನು ಪರಿಶುದ್ಧನಾಗಿದ್ದಾನೆ. ನೀವು ರಾತ್ರಿಯನ್ನು ಭಯಭಕ್ತಿಯಿಂದ ಕಳೆದಿರಿ ಎಂದು ಪ್ರತಿಯೊಂದು ಮುಂಜಾನೆ ನಿಮ್ಮ ಬಗ್ಗೆ ಸಾಕ್ಷ್ಯ ನೀಡಲಿ. ನೀವು ಅಲ್ಲಾಹನಿಗೆ ಹೆದರುತ್ತಾ ಹಗಲಲ್ಲಿ ಜೀವಿಸಿದಿರಿ ಎಂದು ಪ್ರತಿಯೊಂದು ಸಾಯಂಕಾಲ ನಿಮ್ಮ ಬಗ್ಗೆ ಸಾಕ್ಷಿ ಹೇಳಲಿ. ಲೋಕದ ಶಾಪಗಳ ಬಗ್ಗೆ ಹೆದರಬೇಡಿರಿ. ಅವು ಹೊಗೆಯ ಹಾಗೆ ನೋಡನೋಡುತ್ತಿರುವಂತೆಯೇ ಅದೃಶ್ಯವಾಗುವುವು. ಅವು ಹಗಲನ್ನು ರಾತ್ರಿಯಾಗಿ ಮಾಡಲಾರವು. ಆದರೆ ನೀವು ಅಲ್ಲಾಹನ ಶಾಪದ ಬಗ್ಗೆ ಹೆದರಿರಿ. ಅದು ಆಕಾಶದಿಂದ ಇಳಿದು ಬಂದು ಯಾರ ಮೇಲೆ ಬೀಳುತ್ತದೆಯೋ ಅವನ ಎರಡು ಲೋಕಗಳನ್ನೂ ಅದು ನಾಶಮಾಡಿ ಬಿಡುತ್ತದೆ. ನೀವು ತೋರಿಕೆಯ ಕೆಲಸಗಳ ಮೂಲಕ ನಿಮ್ಮನ್ನು ರಕ್ಷಿಸಿಕೊಳ್ಳಲಾರಿರಿ. ನಿಮಗೆ ಅಲ್ಲಾಹನನ್ನು ಮೋಸಗೊಳಿಸಲು ಸಾಧ್ಯವಿದೆಯೇ? ಆದುದರಿಂದ ನೀವು ನೇರವಾಗಿರಿ. ಶುದ್ಧವಾಗಿರಿ. ನಿಷ್ಕಳಂಕರಾಗಿರಿ. ನಿಮ್ಮಲ್ಲಿ ಒಂದಿಷ್ಟು ಕೊಳೆ ಬಾಕಿಯಾಗಿ ಉಳಿದಿದ್ದರೂ ಅದು ನಿಮ್ಮ ಎಲ್ಲ ಪ್ರಕಾಶವನ್ನು ದೂರ ಸರಿಸುವುದು. ನಿಮ್ಮ ಯಾವುದಾದರೂ ಪಾರ್ಶ್ವದಲ್ಲಿ ಅಹಂಭಾವವಿದ್ದರೆ, ತೋರಿಕೆ ಇದ್ದರೆ ಅಥವಾ ತನ್ನಿಷ್ಟ ಪ್ರಕಾರದ ವರ್ತನೆ ಇದ್ದರೆ, ಉದಾಸೀನತೆ ಇದ್ದರೆ, ನೀವು ಅಲ್ಲಾಹನಿಂದ ಸ್ವೀಕರಿಸಲ್ಪಡಲು ಅರ್ಹರಾಗುವುದಿಲ್ಲ. ನೀವು ಕೆಲವು ಕರ್ಮಗಳನ್ನು ಮಾಡಿ ನಿಮ್ಮನ್ನೇ ವಂಚಿಸಬೇಡಿರಿ. ನಾವು ಮಾಡಬೇಕಾದುದನ್ನು ಮಾಡಿರುವೆವು ಎಂದು ಭಾವಿಸಬೇಡಿರಿ. ಏಕೆಂದರೆ ನಿಮ್ಮಲ್ಲಿ ಪೂರ್ಣ ಕ್ರಾಂತಿ ಉಂಟಾಗಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನು ನಿಮ್ಮಿಂದ ಒಂದು ಮರಣವನ್ನು ಆವಶ್ಯಪಡುತ್ತಾನೆ. ಅನಂತರ ಅವನು ನಿಮ್ಮನ್ನು ಜೀವಂತಗೊಳಿಸುವನು. ನೀವು ಪರಸ್ಪರ ರಾಜಿಯಾಗಿರಿ. ನಿಮ್ಮ ಸಹೋದರರ ಪಾಪಗಳನ್ನು ಕ್ಷಮಿಸಿರಿ. ತನ್ನ ಸಹೋದರನೊಂದಿಗೆ ರಾಜಿಯಾಗಲು ಇಷ್ಟಪಡದವನು ಉದ್ಧಟನಾಗಿದ್ದಾನೆ. ಅವನು ತುಂಡರಿಸಲ್ಪಡುವನು. ಏಕೆಂದರೆ ಅವನು ಒಡಕನ್ನುಂಟುಮಾಡುತ್ತಾನೆ. ನೀವು ನಿಮ್ಮ ಸ್ವಾರ್ಥದ ಪ್ರತಿಯೊಂದು ಪಾರ್ಶ್ವವನ್ನು ಬಿಟ್ಟುಬಿಡಿರಿ. ಪರಸ್ಪರ ಸಿಟ್ಟು ಬಿಟ್ಟುಬಿಡಿರಿ. ಸತ್ಯವಂತರಾಗಿ ಸುಳ್ಳುಗಾರರ ಹಾಗೆ ವಿನಯವಂತರಾಗಿರಿ. ಆ ಮೂಲಕ ನೀವು ಕ್ಷಮಿಸಲ್ಪಡಲು ಅರ್ಹರಾಗುವಿರಿ. ನೀವು ಇಂದ್ರಿಯಾಸಕ್ತಿಯ ಬೊಜ್ಜನ್ನು ಬಿಟ್ಟು ಬಿಡಿರಿ. ಯಾಕೆಂದರೆ ಯಾವ ಬಾಗಿಲಿನ ಕಡೆಗೆ ನಿಮ್ಮನ್ನು ಕರೆಯಲಾಗಿದೆಯೋ ಅದರ ಮೂಲಕ ಒಬ್ಬ ಬೊಜ್ಜುದೇಹಿ ಮನುಷ್ಯ ಪ್ರವೇಶಿಸಲಾರನು. ಅಲ್ಲಾಹನ ಬಾಯಿಯಿಂದ ಹೊರಟ, ಹಾಗೂ ನಾನು ವಿವರಿಸಿದ

ಮಾತುಗಳನ್ನು ನಂಬದವನು ದುರದೃಷ್ಟಶಾಲಿ ಆಗಿದ್ದಾನೆ. ಆಕಾಶದಲ್ಲಿ ಅಲ್ಲಾಹನು ನಿಮ್ಮ ಬಗ್ಗೆ ಸಂಪ್ರೀತನಾಗಲು ನೀವು ಬಯಸುವುದಾದರೆ ಒಬ್ಬ ತಾಯಿಯ ಹೊಟ್ಟೆಯಿಂದ ಜನಿಸಿದ ಸಹೋದರರಂತೆ ಆಗಿರಿ. ತನ್ನ ಸಹೋದರರ ಪಾಪವನ್ನು ಹೆಚ್ಚು ಹೆಚ್ಚಾಗಿ ಕ್ಷಮಿಸುವವನೇ ನಿಮ್ಮ ಪೈಕಿ ಗೌರವಾರ್ಹನಾಗಿದ್ದಾನೆ. ಹಟಮಾಡಿ ಕ್ಷಮಿಸದವ ದುರದೃಷ್ಟಶಾಲಿಯಾಗಿದ್ದಾನೆ. ಅವನಿಗೆ ನನ್ನೊಂದಿಗೆ ಯಾವ ಸಂಬಂಧವೂ ಇಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಕೆಟ್ಟ ಕೆಲಸ ಮಾಡುವವನಿಗೆ ಅಲ್ಲಾಹನ ಸಾಮೀಪ್ಯ ದೊರಕಲಾರದು. ಅಹಂಭಾವಿ ಅಲ್ಲಾಹನ ಸಾಮೀಪ್ಯ ಗಳಿಸಲಾರ. ದೌರ್ಜನ್ಯಗಾರ ಅಲ್ಲಾಹನ ಸಾಮೀಪ್ಯ ಗಳಿಸಲಾರ. ವಂಚಕ ಅಲ್ಲಾಹನ ಸಾಮೀಪ್ಯ ಗಳಿಸಲಾರ. ಅಲ್ಲಾಹನ ಬಗ್ಗೆ ಅಭಿಮಾನ ತೋರಿಸದವನು ಸಹ ಅವನ ಸಾಮೀಪ್ಯ ಗಳಿಸಲಾರ. ನಿಮಗೆ ಆವಶ್ಯಕವಾದ ಒಂದು ಉಪದೇಶವೇನೆಂದರೆ ನೀವು ಪವಿತ್ರ ಖುರ್‌ಆನನ್ನು ಬಿಟ್ಟು ಬಿಡಬೇಡಿರಿ. ನಿಮ್ಮ ಜೀವಿತ ಅದರಲ್ಲಿಯೇ ಇದೆ. ಯಾರು ಪವಿತ್ರ ಖುರ್‌ಆನಿಗೆ ಗೌರವ ನೀಡುತ್ತಾರೋ ಅವರು ಆಕಾಶದಲ್ಲಿ ಗೌರವಿಸಲ್ಪಡುವರು. ಪ್ರತಿಯೊಂದು ಹದೀಸ್ ಮತ್ತು ನುಡಿಯ ಮೇಲೆ ಪವಿತ್ರ ಖುರ್‌ಆನಿಗೆ ಯಾರು ಆದ್ಯತೆ ನೀಡಲ್ಪಡುತ್ತಾನೋ ಅವನು ಆಕಾಶದಲ್ಲಿ ಆದ್ಯತೆ ನೀಡಲ್ಪಡುವನು. ಈಗ ಪವಿತ್ರ ಖುರ್‌ಆನ್ ಹೊರತು ಭೂಮಿಯಲ್ಲಿ ಮಾನವರಿಗೆ ಬೇರೆ ಒಂದು ಗ್ರಂಥವಿಲ್ಲ. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೊರತು ಆದಮರ ಸಂತಾನಕ್ಕೆ ಈಗ ಬೇರೊಬ್ಬ ರಸೂಲ್ ಆಗಲಿ ಶಿಫಾರಸುಗಾರನಾಗಲಿ ಇಲ್ಲ. ಆದುದರಿಂದ ನೀವು ಈ ವೈಭವಶಾಲಿ ಪೈಗಂಬರರೊಂದಿಗೆ ಸತ್ಯವಾದ ಪ್ರೀತಿ ಹೊಂದಿರಿ. ಬೇರೆ ಯಾರಿಗೂ ಅವರಿಗಿಂತ ಉನ್ನತ ಸ್ಥಾನ ನೀಡ ಬೇಡಿರಿ– ಆಕಾಶದಲ್ಲಿ ನೀವು ಮೋಕ್ಷಗಳಿಸಿದವರೆಂದು ಬರೆಯಲ್ಪಡಲಿಕ್ಕಾಗಿ. ಮೋಕ್ಷ ಎಂದರೆ ಮೃತನಾದ ನಂತರ ಪ್ರಕಟವಾಗುವ ಒಂದು ವಸ್ತುವಲ್ಲ ಎಂದು ನೆನಪಿನಲ್ಲಿಡಿರಿ. ವಾಸ್ತವಿಕ ಮೋಕ್ಷವು ಇಹಲೋಕದಲ್ಲಿಯೇ ತನ್ನ ಪ್ರಕಾಶವನ್ನು ತೋರಿಸುತ್ತದೆ.

ಮೋಕ್ಷ ಗಳಿಸಿದವನು ಯಾರು? ಅಲ್ಲಾಹನು ಇದ್ದಾನೆಂದು ಸತ್ಯವಾಗಿ ನಂಬುವವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಮಧ್ಯೆ ಶಿಫಾರಸುಗಾರರೆಂದು ನಂಬಿದವನು. ಆಕಾಶದ ಕೆಳಗೆ ಅವರಿಗೆ ಸಮಾನರಾದ ಒಬ್ಬ ಪ್ರವಾದಿಯೂ ಇಲ್ಲ. ಪವಿತ್ರ ಖುರ್‌ಆನಿಗೆ ಸಮಾನವಾದ ಬೇರೆ ಯಾವ ಗ್ರಂಥವೂ ಇಲ್ಲ. ಯಾರಾದರೂ ಶಾಶ್ವತವಾಗಿ ಜೀವಿಸಿರಬೇಕೆಂದು ಅಲ್ಲಾಹನು ಇಚ್ಛಿಸಿಲ್ಲ. ಆದರೆ ಈ ಶ್ರೇಷ್ಠ ಪೈಗಂಬರರು ಶಾಶ್ವತರಾಗಿ ಜೀವಿಸಿರುವವರಾಗಿದ್ದಾರೆ.

ಈ ರಮಝಾನ್‌ನಲ್ಲಿ ನಮ್ಮ ಪೈಕಿ ಪ್ರತಿಯೊಬ್ಬನು ಈ ಪ್ರತಿಜ್ಞೆ ಮಾಡಿ ಹೊರಗೆ ಬರಬೇಕು: ಅಲ್ಲಾಹನು ಮತ್ತು ಅವನ ಸಂದೇಶವಾಹಕರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವುದನ್ನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿರುವುದನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸುವೆವು ಮತ್ತು ಅವುಗಳ ಪ್ರಕಾರ ಜೀವಿಸಲು ಪ್ರಯತ್ನ ಮಾಡುವೆವು ಎಂದು. ನಾವು ಹಾಗೆ ಮಾಡುವುದಾದರೆ ಮಾತ್ರ ಈ ರಮಝಾನ್‌ನಲ್ಲಿ ನಾವು ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಪ್ರಕಾರ ಜೀವಿಸಲು ಪ್ರಯತ್ನಿಸಿದೆವು ಎಂದು ಹೇಳಲು ಸಾಧ್ಯ. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಇಬ್ಬರು ಮೃತರ ಬಗ್ಗೆ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ತಿಳಿಸಿದರು. 1. ಮಹ್ತರಮ ಮುಶ್ತಾಖ್ ಝುಹ್ರ ಸಾಹಿಬ, ಮುಕರ್ರಮ್ ಚೌಧರಿ ಝುಹೂರ್ ಅಹ್ಮದ್ ಬಾಜ್ವ ಸಾಹೇಬ್ ರಬ್ವರವರ ಪತ್ನಿ.

2. ಮುಕರ್ರಮ್ ಅಬ್ದು ಬಕರ್ ಸಾಹಿಬ್, ಮಿಸ್ರ್. ಇವರಿಬ್ಬರ ಸದ್ಗುಣಗಳನ್ನು ಹುಝೂರ್ ವಿವರಿಸಿದರು).

—————————*****—————————

***Friday Sermon delivered by Hadrath Khaleefatul Masih Al Khamis***$^{(atba)}$

*At, Masjid Baithul Futhuh, London on 23-06-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon